ಕಟ್ಟಳೆ ಹಾಕಲಾಗಿರುವುದು ನಿಜವೆ ; ಒಪ್ಪಂದದ ವಿವರ ಹಾಗೂ ಸದರಿ ಕಾಮಗಾರಿಯ ಅಂದಾಜು ವೆಚ್ಚದ ವಿವರ ನೀಡುವುದು ?

ಅ) ಹಾಗಿದ್ದಲ್ಲಿ ಈ ಕಾರ್ಯಕ್ಕಾಗಿ ಇಲ್ಲಿಯವರೆಗೆ ಮಾಡಲಾದ ವೆಚ್ಚವೆಷ್ಟು. ಕೇಂದ್ರ-ರಾಜ್ಯ ಸರ್ಕಾರಗಳು ಇದಕ್ಕಾಗಿ ತೆಗೆದಿಡಲಾದ ಹಣವೆಷ್ಟು ; ಸಾರ್ವಜನಿಕ ಬ್ಯಾಂಕ್-ಸಂಸ್ಥೆಗಳಿಂದ ಇಲ್ಲಿಯವರೆಗೂ ಸಂಗ್ರಹಿಸಲಾಗಿರುವ ಹಣವೆಷ್ಟು ; ಎಲ್ಲಾ ವಿವರಗಳನ್ನು ನೀಡುವುದು ?

ಇ) ಒಟ್ಟಾರೆ, ಈ ಕಾರ್ಯದಲ್ಲಿ ಆಗಿರುವ ಪ್ರಗತಿ ಏನು ?

ಶ್ರೀ ಟಿ. ಜಾನ್ (ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ನಾಲ್ಕು ರೈಲ್ವೆ ಮೂಲ ಸೌಲಭ್ಯ ಅಭಿವೃದ್ಧಿ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಹಣ ತೊಡಗಿಸುವ ಮುಖ್ಯ ಧ್ಯೇಯೋದ್ದೇಶದಿಂದ ರೈಲ್ವೆ ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಗಮ (ಕೆ-ರೈಡ್) ಎಂಬುದನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ದಿನಾಂಕ : 20-9-2000 ದಂದು ಕೇಂದ್ರ ಸರ್ಕಾರದ ರೈಲ್ವೆ ಮಂತ್ರಾಲಯದೊಂದಿಗೆ ಜ್ಞಾಪನ ಒಪ್ಪಂದಕ್ಕೆ ಬರಲಾಗಿದೆ. ಅದರಂತೆ ಕಂಪನಿ ಕಾಯ್ದೆ 1956ರ ಅನ್ವಯ ದಿನಾಂಕ : 20-11-2001 ಕೆ-ರೈಡ್‌ನ್ನು ಸ್ಥಾಪಿಸಲಾಯಿತು. ಜ್ಞಾಪನ ಒಪ್ಪಂದದ ಅಡಿಯಲ್ಲಿ ಸೊಲ್ಲಾಪುರ (ಬಿಜಾಪುರ)-ಗದಗ ಗೇಜ್ ಪರಿವರ್ತನೆ ಸಹ ಒಳಗೊಂಡಿದೆ. ಗದಗ-ಬಿಜಾಪುರ ಗೇಜ್ ಪರಿವರ್ತನೆಯ ಒಟ್ಟಾರೆ ವೆಚ್ಚ ರೂ. 127.00 ಕೋಟಿಗಳು.

ಆ) ಸೋಲಾಪುರ-ಗದಗ್‌ನ ಗೇಜ್ ಪರಿವರ್ತನೆಯ ಯೋಜನೆಯನ್ನು 50 : 50 ಪ್ರಮಾಣದ ವೆಚ್ಚವನ್ನು ರೈಲ್ವೆ ಮತ್ತು ರಾಜ್ಯ ಸರ್ಕಾರಗಳು ಭರಿಸುವ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಭಾರತ ಸರ್ಕಾರವು ರೂ. 20.00 ಕೋಟಿಗಳನ್ನು ಇದಕ್ಕೆ ಮೀಸಲಾಗಿರಿಸಿದ್ದು, ರಾಜ್ಯ ಸರ್ಕಾರವು ಕೂಡ ಸಮನಾದ ಮೊತ್ತವಾದ ರೂ. 20.00 ಕೋಟಿ ಗಳನ್ನು ಆಯವ್ಯಯದಲ್ಲಿ ಒದಗಣಿ ಮಾಡಲಾಗಿದೆ.

ಇ) ಸೋಲಾಪುರದಿಂದ ಬಿಜಾಪುರದವರೆಗಿನ ಗೇಜ್ ಪರಿವರ್ತನೆ ಈಗಾಗಲೇ ಮುಗಿದಿರುತ್ತದೆ. ಬಿಜಾಪುರದಿಂದ ಬಾಗಲಕೋಟೆವರೆಗಿನ 97 ಕಿ.ಮೀ. ಉದ್ದದ ಮಾರ್ಗದ ಪರಿವರ್ತನ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಮಾರ್ಗವು ಒಂದು ಪ್ರಮುಖ ಹಾಗೂ ಇನ್ನೊಂದು ದೊಡ್ಡ ಸೇತುವೆ ಕಾಮಗಾರಿ ಒಳಗೊಂಡಿರುತ್ತದೆ. ಇವುಗಳ ನಿರ್ಮಾಣ ಮುಕ್ತಾಯಗೊಂಡ ನಂತರ ಹಾಗೂ ಈ ಮಾರ್ಗ ಸಂಚಾರಕ್ಕೆ ಮುಕ್ತವಾದ ನಂತರ 93 ಕಿ.ಮೀ. ಉದ್ದದ ಬಾಗಲಕೋಟೆಯಿಂದ ಗದಗ್‌ವರೆಗಿನ ಪರಿವರ್ತನ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಕೆ.ಎಸ್.ಆರ್.ಟಿ.ಸಿ. ಯ ನಿವೃತ್ತ ನೌಕರರಿಗೆ ಸಾರಿಗೆಯಲ್ಲಿ ಉಚಿತ ಪಾಸ್

1648 (1858) ಶ್ರೀ ರಾಮದಾಸ್ ಎ. (ಕೃಷ್ಣರಾಜ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಎಸ್.ಆರ್.ಟಿ.ಸಿ. ಯ ನಿವೃತ್ತ ನೌಕರರಿಗೆ ರಾಜ್ಯ ಸಾರಿಗೆಯಲ್ಲಿ ಉಚಿತವಾಗಿ ಸಂಚರಿಸಲು ಪಾಸ್ ನೀಡಲಾಗಿದೆಯೇ ; ಈ ಪ್ರಯೋಜನವನ್ನು ಎಷ್ಟು ಜನ ಪಡೆಯುತ್ತಿದ್ದಾರೆ.

ಆ) ಉಚಿತವಾಗಿ ಸಂಚರಿಸುವ ಸೌಲಭ್ಯ ಕೇವಲ ನಗರ ಸಾರಿಗೆಗೆ ಸೀಮಿತವಾಗಿದೆಯೇ ;

ಇ) ಈ ಸೌಲಭ್ಯವನ್ನು ಗ್ರಾಮಾಂತರ ಸಾರಿಗೆ ಬಸ್‌ಗಳಲ್ಲೂ ಸಂಚರಿಸಲು ಕಲ್ಪಿಸಬಹುದೇ ಇದರ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ದಿನಾಂಕ : 31-12-1987 ರ ನಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸೇವೆಯಿಂದ ನಿವೃತ್ತರಾದ 3 ಮತ್ತು 4ನೇ ದರ್ಜೆಯ ನೌಕರರಿಗೆ ನಗರ ಸಾರಿಗೆಯಲ್ಲಿ ಮಾತ್ರ ಪಾಸ್ ನೀಡಲು ಅವಕಾಶವಿರುತ್ತದೆ ಇದುವರೆವಿಗೆ 429 ನಿವೃತ್ತ ನೌಕರರಿಗೆ ನಗರ ಸಾರಿಗೆಯಲ್ಲಿ ಸಂಚರಿಸಲು ಸಂಸ್ಥೆಯ ವತಿಯಿಂದ ಉಚಿತ ಪಾಸ್ ನೀಡಲಾಗಿದೆ.

ಆ) ಹೌದು.

ಇ) ಇಲ್ಲ, ಸರ್ಕಾರದ ಮುಂದೆ ಈ ರೀತಿಯ ಪ್ರಸ್ತಾಪ ವಿರುವುದಿಲ್ಲ.

ರಾಜ್ಯದಲ್ಲಿ ಆಸ್ತಿ ತೆರಿಗೆ ವಸೂಲಿಗೆ ಜಾರಿಯಲ್ಲಿರುವ ಕಾನೂನುಗಳು

1649 (1859) ಶ್ರೀ ಎ. ರಾಮದಾಸ್ (ಕೃಷ್ಣರಾಜ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ನಗರಪಾಲಿಕೆ ವ್ಯಾಪ್ತಿಯೊಳಗೆ ಆಸ್ತಿ ತೆರಿಗೆಯನ್ನು ಹಾಲಿ ಯಾವ ಕಾನೂನಿನ ಅಡಿ ವಸೂಲು ಮಾಡಲಾಗುತ್ತಿದೆ ?

ಆ) ಈ ರಾಜ್ಯದಲ್ಲಿ ಜಾರಿಯಲ್ಲಿರುವ ಆಸ್ತಿ ತೆರಿಗೆ ಕಾನೂನು ಯಾವುದು ?

ಇ) ಯಾವ ಯಾವ ನಗರಪಾಲಿಕೆಗಳು ಹೊಸ ಕಾನೂನು ಪಾಲಿಸುತ್ತಿವೆ ? ಯಾವ ಯಾವ ಪಾಲಿಕೆಗಳು ಪಾಲಿಸಲು ಸಾಧ್ಯವಿಲ್ಲವೆಂದು ತಿಳಿಸಿವೆ ?

ಈ) ರಾಜ್ಯದಲ್ಲಿ ಒಂದೇ ವಿಷಯಕ್ಕೆ 2 ಕಾನೂನು ಹೊಂದಲು ಅವಕಾಶ ಇದೆಯೇ ? ದ್ವಂದ್ವದ ನಿವಾರಣೆಗೆ ಸರ್ಕಾರದ ಕ್ರಮವೇನು ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿನ ಎಲ್ಲಾ ಮಹಾನಗರ ಪಾಲಿಕೆಯ ವ್ಯಾಪ್ತಿಯೊಳಗೆ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಕರ್ನಾಟಕ ಪೌರ ನಿಯಮಗಳ ತಿದ್ದುಪಡಿ ಕಾಯ್ದೆ 1976ರ ತಿದ್ದುಪಡಿ ಕಾಯ್ದೆ 2000 ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಅಳವಡಿಸಲು ಅಧಿಸೂಚನೆಯನ್ನು ದಿನಾಂಕ : 19-11-2001 ಜಾರಿಗೆ ತರಲಾಗಿದೆ. ಇದನ್ನು ಮಹಾನಗರ ಪಾಲಿಕೆಗಳು ಅಳವಡಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ಆ) ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ಕಾಯ್ದೆ 2000 ರನ್ವಯ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ರಾಜ್ಯಾದ್ಯಂತ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಮಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ, ಉಳಿದ ಮಹಾನಗರ ಪಾಲಿಕೆಗಳಲ್ಲಿ ಹೊಸ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಳ್ಳುವ ಕೆಲಸವು ವಿವಿಧ ಹಂತದಲ್ಲಿರುತ್ತದೆ. ಮಂಗಳೂರು ಮಹಾನಗರ ಪಾಲಿಕೆಯು ಹೊಸ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೊಳಿಸಲು ಸಾಧ್ಯವಿಲ್ಲವೆಂದು ತಿಳಿಸಿದೆ.

ಈ) ಇಲ್ಲಾ, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ತಿದ್ದುಪಡಿ ಕಾಯ್ದೆ 2000 ರಂತೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಜಾರಿಗೊಳಿಸಲು ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳುತ್ತಿದೆ.